# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರಳ ಸಾಮೂಹಿಕ ವಿವಾಹ ಜನಪ್ರಿಯಗೊಳಿಸಲು "ಆದರ್ಶ ವಿವಾಹ" ಯೋಜನೆ ಜಾರಿ - ಪ್ರೋತ್ಸಾಹ ಧನ ನೀಡುವ ಕುರಿತು.

ಓದಲಾಗಿದೆ:- ಪ್ರಸಕ್ತ ಆರ್ಥಿಕ ಸಾಲಿನ 2007-08ನೇ ಸಾಲಿನಲ್ಲಿ ಆರ್ಥಿಕ ಆಯವ್ಯಯದ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರ ಘೋಷಣೆ.

**ಪ್ರಸ್ತಾವನೆ:-**

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸರಳ ಸಾಮೂಹಿಕ ವಿವಾಹ ಜನಪ್ರಿಯಗೊಳಿಸಲು **"ಆದರ್ಶ ವಿವಾಹ"** ಯೋಜನೆಯನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದೆ. ಕನಿಷ್ಠ 25 ವಿವಾಹಗಳು ನಡೆದಿರುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆಯಾಗುವವರು ಮಾತ್ರ ಈ ಅನುಕೂಲ ಪಡೆಯಲು ಅರ್ಹತೆ ಹೊಂದಿರುತ್ತಾರೆ ಎಂದು ಘೋಷಿಸಲಾಗಿದೆ. 2007-08ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಯ ವೆಚ್ಚವನ್ನು ಭರಿಸಲು ಲೆಕ್ಕಶೀರ್ಷಿಕೆ 2250-00-800-2-17 (ಯೋಜನೆ) ಸಾಮೂಹಿಕ ವಿವಾಹಗಳಡಿಯಲ್ಲಿ ರೂ. 1000.00 ಲಕ್ಷಗಳನ್ನು ಒದಗಿಸಲಾಗಿದೆ. ಈ ಯೋಜನೆಯನ್ನು ಸಮಾಜದ ಒಳಿತಿಗಾಗಿ ರೂಪಿಸಿರುವ ಯೋಜನೆಯಾಗಿರುವುದರಿಂದ ಇದನ್ನು ಅತಿ ಕಟ್ಟುನಿಟ್ಟಾಗಿ ಪಾಲಿಸಿ ಜನರ ಹಿತರಕ್ಷಣೆಯನ್ನು ಕಾಪಾಡುವ ಉದ್ದೇಶವಿದೆ. ಅದರಂತೆ ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 81 ಎಂಎಸ್‌ಟಿ 2007, ಬೆಂಗಳೂರು, ದಿನಾಂಕ: 02-05-2007**

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಆದರ್ಶ ವಿವಾಹ ಯೊಜನೆಯಡಿಯಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆಯಾಗುವ ಪ್ರತಿಯೊಬ್ಬ ಯುವತಿಗೂ ರೂ. 10,000/-ಗಳ ಪ್ರೋತ್ಸಾಹ ಧನವನ್ನು 2 ವರ್ಷಗಳ ಅವಧಿಯವರೆಗೂ ಠೇವಣಿ ರೂಪದಲ್ಲಿ ನೀಡಲು ಮಂಜೂರಾತಿಯನ್ನು ನೀಡಿದೆ. **"ಆದರ್ಶ ವಿವಾಹ"** ಎಂಬ ಹೊಸ ಯೋಜನೆಯನ್ನು ಇದಕ್ಕೆ ಲಗತ್ತಿಸಿರುವ ಮಾರ್ಗಸೂಚಿಗಳಂತೆ ಜಾರಿಗೆ ತರಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

ಈ ಯೋಜನೆಯನ್ನು ಸಾಮೂಹಿಕ ವಿವಾಹಗಳು (ಆದರ್ಶ ವಿವಾಹ) ಎಂದು ಕರೆಯತಕ್ಕದ್ದು.

ಈ ಸಾಮಾಜಿಕ ವಿವಾಹಗಳ ಕಾರ್ಯಕ್ರಮದಲ್ಲಿ ಕನಿಷ್ಠ 25 ಜೋಡಿ ವಿವಾಹಗಳನ್ನು ಸಂಘಟಿಸುವ ಸಂಘಟನೆಗಳಿಗೂ ವಿವಾಹವಾಗುವ ಪ್ರತಿ ಜೋಡಿಗೆ ರೂ. 100/-ರಂತೆ ಪ್ರೋತ್ಸಾಹ ಧನವನ್ನು ನೀಡತಕ್ಕದ್ದು.

. . . . 2

ಈ ಯೋಜನೆಗೆ ತಗಲುವ ವೆಚ್ಚ ರೂ. 100.00 ಲಕ್ಷಗಳನ್ನು (ಒಂದು ನೂರು ಲಕ್ಷಗಳ ರೂಪಾಯಿಗಳು ಮಾತ್ರ) ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1ರಲ್ಲಿರುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಯೋಜನೆಗೆ ತಗಲುವ ವೆಚ್ಚವನ್ನು 2007-08ನೇ ಆರ್ಥಿಕ ಸಾಲಿನ ಲೆಕ್ಕಶೀರ್ಷಿಕೆ 2250-00-800-2-17-059, ಇತರೆ ಖರ್ಚು (ಯೋಜನೆ), 2250-00-800-2-17-422 ವಿಶೇಷ ಘಟಕ ಯೋಜನೆ ಮತ್ತು 2250-00-800-2-17-423 ಗಿರಿಜನ ಉಪಯೋಜನೆ ಯಡಿಯಲ್ಲಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು. ಈ ಹೊಸ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯವರು ಉಸ್ತುವಾರಿ ಮಾಡತಕ್ಕದ್ದು. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಈ ಯೋಜನೆ ಹಣವನ್ನು ಖಜಾನೆಯಿಂದ ಪಡೆಯಲು ಹಾಗೂ ಸಂದಾಯಮಾಡಲು ಡ್ರಾಯಿಂಗ್ ಅಧಿಕಾರಿಯೆಂದು ಪದನಾಮಗೊಳಿಸಲಾಗಿದೆ.

ಈ ಯೋಜನೆಯ ಅಂಕಿಅಂಶಗಳ ವರದಿಗಳನ್ನು ಅದರ ವಿಮರ್ಶೆಗಾಗಿ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಪ್ರಾದೇಶಿಕ ಆಯುಕ್ತರು ಹಾಗೂ ಸರ್ಕಾರಕ್ಕೆ ಪ್ರತಿ ಮೂರು ತಿಂಗಳಿಗೊಮ್ಮೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ:10-07-1996ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಕೆ. ನರಸಿಂಹಲು) 3/5/07
ಸರ್ಕಾರದ ಅಧೀನಕಾರ್ಯದರ್ಶಿ
ಕಂದಾಯ ಇಲಾಖೆ(ಭೂಸುಧಾರಣಾ ಕೋಶ)

ಇವರಿಗೆ,

(1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) (ಎ ಮತ್ತು ಇ), ಕರ್ನಾಟಕ ಬೆಂಗಳೂರು.
(2) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
(3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ,/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ ಸಮಾಜ ಕಲ್ಯಾಣ ಇಲಾಖೆ.
(4) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
(5) ಮಾನ್ಯ ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
(6) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
(7) ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ ವಿಭಾಗ.
(8) ಎಲ್ಲಾ ಜಿಲ್ಲಾಧಿಕಾರಿಗಳು.
(9) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
(10) ಉಪ ನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು.
(11) ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪಖಜಾನೆ ಅಧಿಕಾರಿಗಳು.
(12) ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
(13) ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

25

**ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 81 ಎಂಎಸ್‌ಟಿ 2007ಕ್ಕೆ ಅನುಬಂಧ-1**

**ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ )**

| ಕ್ರ. ಸಂ. | ಜಿಲ್ಲೆಯ ಹೆಸರು | ಲೆಕ್ಕಶೀರ್ಷಿಕೆ 2250-00-800-2-17-059 | ಲೆಕ್ಕಶೀರ್ಷಿಕೆ 2250-00-800-2-17-422 | ಲೆಕ್ಕಶೀರ್ಷಿಕೆ 2250-00-800-2-17-423 |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 3.00 | 0.50 | 0.40 |
| 2 | ಬಾಗಲಕೋಟೆ | 5.00 | 1.00 | 0.50 |
| 3 | ಬೆಳಗಾಂ | 5.00 | 1.00 | 0.40 |
| 4 | ಬೀದರ್ | 5.00 | 1.00 | 0.40 |
| 5 | ಬಳ್ಳಾರಿ | 5.00 | 1.00 | 0.40 |
| 6 | ರಾಯಚೂರು | 5.00 | 1.00 | 0.40 |
| 7 | ಧಾರವಾಡ | 5.00 | 1.00 | 0.40 |
| 8 | ಶಿವಮೊಗ್ಗ | 5.00 | 1.00 | 0.40 |
| 9 | ಚಿತ್ರದುರ್ಗ | 5.00 | 1.00 | 0.40 |
| 10 | ಕೊಪ್ಪಳ | 5.00 | 1.00 | 0.40 |
| 11 | ಚಾಮರಾಜನಗರ | 5.00 | 1.00 | 0.40 |
| 12 | ಗದಗ್ | 5.00 | 1.00 | 0.40 |
| 13 | ಹಾವೇರಿ | 5.00 | 1.00 | 0.40 |
| 14 | ಹಾಸನ | 5.00 | 1.00 | 0.40 |
| 15 | ಗುಲ್ಬರ್ಗ | 5.00 | 1.00 | 0.40 |
| 16 | ಬಿಜಾಪುರ | 5.00 | 1.00 | 0.40 |
|  | ಒಟ್ಟು | **78.00** | **15.50** | **6.50** |

(ಎಂ.ಕೆ. ನರಸಿಂಹಲು) 2-1-5-07
ಸರ್ಕಾರದ ಅಧೀನಕಾರ್ಯದರ್ಶಿ
ಕಂದಾಯ ಇಲಾಖೆ(ಭೂಸುಧಾರಣಾ ಕೋಶ)